# ಕರ್ನಾಟಕಸರ್ಕಾರ

ಸಂಖ್ಯೆ:ಡಿವೈಇಎಸ್/ಖೇಇ೦/17/2022-23

ಆಯುಕ್ತರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯಯುವಕೇಂದ್ರ, ನೃಪತುಂಗರಸ್ತೆ,
ಬೆಂಗಳೂರು, ದಿನಾಂಕ: 11/08/2022

## ಸುತ್ತೋಲೆ

ವಿಷಯ: ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರಕ್ಕೆ ಕ್ರೀಡಾಪಟುಗಳ ಆಯ್ಕೆ ಮಾಡುವ ಕುರಿತು.

*****

ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ ವಿದ್ಯಾನಗರ ಬೆಂಗಳೂರು ಇಲ್ಲಿನ ತರಬೇತಿ ಕೇಂದ್ರಕ್ಕೆ ಅಥ್ಲೆಟಿಕ್ಸ್, ಶೂಟಿಂಗ್ ಹಾಗೂ ಈಜು ಕ್ರೀಡೆಗಳಲ್ಲಿ ಪ್ರತಿಭಾನ್ವಿತರಾಗಿರುವ ಹಾಗೂ ಪ್ರತಿಭೆಗಳನ್ನು ಆಯ್ಕೆ ಮಾಡುವ ಸಲುವಾಗಿ **ಶ್ರೀ ಜಯ ಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ಕ್ರೀಡಾಶಾಲೆ, ವಿದ್ಯಾನಗರ, ಬೆಂಗಳೂರು ಕೇಂದ್ರಗಳಲ್ಲಿ ದಿನಾಂಕ: 23.08.2022 ಮತ್ತು 24.08.2022ರಂದು** ಆಯ್ಕೆ ಪ್ರಕ್ರಿಯೆಯನ್ನು ಸಂಘಟಿಸಲಾಗುವುದು ಆಸಕ್ತ ಅರ್ಹ ಕ್ರೀಡಾಪಟುಗಳು ಆಯ್ಕೆಯಲ್ಲಿ ಭಾಗವಹಿಸ ಬಹುದಾಗಿದೆ.

**ಭಾಗವಹಿಸಲು ಅರ್ಹತೆಗಳು (ಆಯ್ಕೆಸಮಯದಲ್ಲಿ)**

- ದಿನಾಂಕ 01-07-2022 ಕ್ಕೆ 14 ವರ್ಷ ಮೇಲ್ಪಟ್ಟವರಾಗಿದ್ದು 23 ವರ್ಷ ಒಳಪಟ್ಟವರಾಗಿರಬೇಕು ಅಂತರಾಷ್ಟ್ರೀಯ ಕ್ರೀಡಾಪಟುಗಳಿಗೆ 2 ವರ್ಷಗಳ ವಯೋಮಿತಿಯನ್ನು ಸಡಿಲಗೊಳಿಸಲಾಗುವುದು, ತಜ್ಞರ ಸಮಿತಿ ಶಿಫಾರಸ್ಸಿನ ಅನ್ವಯ ಗರಿಷ್ಟ ವಯೋಮಿತಿಯನ್ನು ಸಾಮರ್ಥ್ಯದ ಆಧಾರದ ಮೇಲೆ ನಿಗದಿಪಡಿಸಲಾಗುವುದು.
- ಪಾಸ್ಪೋರ್ಟ್ ಅಳತೆಯ ಇತ್ತಿಚಿನ ಭಾವಚಿತ್ರದೊಂದಿಗೆ ಸ್ವವಿವರದ ಅರ್ಜಿಯನ್ನು ಆಯ್ಕೆ ಸಂದರ್ಭದಲ್ಲಿಸಲ್ಲಿಸ ಬೇಕು.
- ಕರ್ನಾಟಕದಲ್ಲಿ ಜನಿಸಿದ ಹಾಗೂ ವಾಸಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು ಆಧಾರ್ಕಾರ್ಡ್ ನಕಲು ಪ್ರತಿ ಹಾಗೂ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
- ಕನಿಷ್ಟ ಪಕ್ಷ ರಾಜ್ಯಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ (ರಾಜ್ಯ ಅಥ್ಲೆಟಿಕ್ಸ್ ಶೂಟಿಂಗ್ ಹಾಗೂ ಈಜು ಸಂಸ್ಥೆ, ರಾಜ್ಯ ಶಾಲಾ ಕ್ರೀಡಾಕೂಟ, ವಿಶ್ವವಿದ್ಯಾನಿಲಯ ಸಂಘಟಿಸುವ ಕ್ರೀಡಾಕೂಟ,) ಪದಕ ಪಡೆದಿರ ಬೇಕು.
- ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟದಲ್ಲಿ (ಅಥ್ಲೆಟಿಕ್ಸ್ ಶೂಟಿಂಗ್ ಹಾಗೂ ಈಜು ಫೆಡರೇಷನ್, ಶಾಲಾ ರಾಷ್ಟ್ರೀಯ ಫೆಡರೇಷನ್ ಹಾಗೂ ಅಖಿಲ ಭಾರತ ವಿಶ್ವವಿದ್ಯಾನಿಲಯ ಸಂಘಟಿಸುವ ಕ್ರೀಡಾಕೂಟ,) ಭಾಗವಹಿಸಿ ಪದಕ ಪಡೆದವರಿಗೆ ಪ್ರಾಶಸ್ತ್ಯ ನೀಡಲಾಗುವುದು.
- ಕಳೆದ ಹಾಗೂ ಪ್ರಸ್ತುತ ಸಾಲಿನ ಕ್ರೀಡಾ ಕೂಟದ ಸ್ಪರ್ಧೆಗಳಲ್ಲಿ ಭಾಗವಹಿಸಿರ ಬೇಕು.
- ಕರ್ನಾಟಕದಲ್ಲಿ ಜನಿಸಿದ ಹಾಗೂ ವಾಸಿಸುತ್ತಿರುವ ಬಾಲಕ ಬಾಲಕಿಯರು ಹಾಗೂ ಕ್ರೀಡಾ ಕೊಟದಡಿಯಲ್ಲಿ ನೇಮಕಗೊಂಡಿರುವ ಕ್ರೀಡಾಪಟುಗಳು ಭಾಗವಹಿಸಬಹುದು.
- ಈ ಆಯ್ಕೆ ಪ್ರಕ್ರಿಯೆಯಲ್ಲಿ ಇಲಾಖೆಯ ಕ್ರೀಡಾಶಾಲೆ / ನಿಲಯ ಯೋಜನೆಯಲ್ಲಿ ಆಯ್ಕೆಗೊಂಡಿರುವ ಕ್ರೀಡಾಪಟುಗಳು ಭಾಗವಹಿಸಬಹುದಾಗಿದೆ, ಈ ಆಯ್ಕೆಪ್ರಕ್ರಿಯ ದಿನದಂದು ಸಂಘಟಿಸಲಾಗುವ ಆಯ್ಕೆ ಪರೀಕ್ಷೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.
- ಜನ್ಮದಿನಾಂಕದ ದಾಖಲಾತಿಗಾಗಿ ಜನನ ಪ್ರಮಾಣ ಪತ್ರ ಅಥವಾ ಶೈಕ್ಷಣಿಕ ಶಾಲಾಮುಖ್ಯಸ್ಥರಿಂದ ಧೃಡಿಕರಿಸಲ್ಪಟ್ಟ ಹಾಗೂ 10 ನೇ ತರಗತಿ ತೇರ್ಗಡೆಗೊಂಡಿರುವ ಅಂಕಪಟ್ಟಿಯ ನಕಲು ಪ್ರತಿ ಹಾಗೂ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.

Scanned by CamScanner

- ಕ್ರೀಡೆಗಳಲ್ಲಿ ಸಾಧಿಸಲಾಗಿರುವ ಸಾಧನೆ ಹಾಗೂ ಸಾಮರ್ಥ್ಯದ ಪ್ರಮಾಣ ಪತ್ರದ ನಕಲು ಪ್ರತಿ ಹಾಗೂ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
- ಆರೋಗ್ಯ ಧೃಡೀಕರಣ ಹಾಗೂ ದೈಹಿಕ ಸಾಮರ್ಥ್ಯದ ಪ್ರಮಾಣ ಪತ್ರವನ್ನು ಸರ್ಕಾರಿ ವೈದ್ಯರಿಂದ ಧೃಡೀಕರಿಸಿದ ನಕಲು ಪ್ರತಿ ಹಾಗೂ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
- ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಗೊಂಡ ಕ್ರೀಡಾಪಟುಗಳಿಗೆ ಇಲಾಖಾವತಿಯಿಂದ ಪರಿಶೀಲನಾ ತರಬೇತಿ ಶಿಬಿರವನ್ನು ಏರ್ಪಡಿಸಿ ಅರ್ಹತೆಗಳಿಸಿದ ಕ್ರೀಡಾಪಟುಗಳಿಗೆ ಪ್ರವೇಶವನ್ನು ನೀಡಲಾಗುವುದು.
- ಶ್ರೀ ಜಯ ಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರಕ್ಕೆ ತಲುಪಲು ಮಾರ್ಕೆಟ್ ನಿಂದ 282B, 282C,282E BMTC ಬಸ್ಸುಗಳು ಮಾರ್ಕೆಟ್ ನಿಂದ ಪ್ರಾರಂಭಗೊಂಡು ವಯಾ ಮೆಜೆಸ್ಟಿಕ್ ಮುಖಾಂತರ ನೇರವಾಗಿ ವಿದ್ಯಾನಗರಕ್ಕೆ ತಲುಪುತ್ತದೆ.

ಮೇಲ್ಕಂಡ ಆಯ್ಕೆ ಪ್ರಕ್ರಿಯೆ ಬಗ್ಗೆ ಇಲಾಖೆಯ ಉಪನಿರ್ದೇಶಕರು / ಸಹಾಯಕ ನಿರ್ದೇಶಕರು / ತರಬೇತುದಾರರು ಹೆಚ್ಚಿನ ಪ್ರಚಾರ ನೀಡಿ ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸುವ ಬಗ್ಗೆ ಕ್ರಮ ಕೈಗೂಳ್ಳುವಂತೆ ಸೂಚಿಸಿದೆ.

**ಹಕ್ಕು ನಿರಾಕರಣ ನಿಯಮಗಳು:**

- ಆಯ್ಕೆಯ ಸಮಯದಲ್ಲಿ ಯಾವುದೇ ಗಾಯಗಳು, ಅನಾರೋಗ್ಯ ಯಾವುದೇ ಇತರ ಸಾವು ನೋವುಗಳು, ಶಾಶ್ವತ ಅಂಗವೈಕಲ್ಯ ಮತ್ತು ಜೀವಹಾನಿ ಸಂಭವಿಸಿದರೆ ಸಂಸ್ಥೆ ಅಥವಾ ಇಲಾಖೆ ಜವಾಬ್ದಾರಿಯುತವಾಗಿರುವುದಿಲ್ಲ.
- ಆಯ್ಕೆಗೆ ಹಾಜರಾಗುವ ಕ್ರೀಡಾಪಟುಗಳಿಗೆ ಯಾವುದೇ ದಿನ ಭತ್ಯೆ, ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.
- ಆಯ್ಕೆಯ ಸಮಯದಲ್ಲಿ ಲಘು ಭೋಜನವನ್ನು ಮಾತ್ರ ನೀಡಲಾಗುತ್ತದೆ.
- ಆಯ್ಕೆ ಟ್ರೇಲ್‌ಗಳಲ್ಲಿ ಫೆಡರೇಶನ್‌ನಿಂದ ಅನುಮೋದಿಸಲ್ಪಟ್ಟ ಮತ್ತು ಪ್ರಮಾಣೀಕೃತ ಕ್ರೀಡಾ ಸಾಮಗ್ರಿಗಳನ್ನು ಬಳಸಲಾಗುವುದು.
- ಶೂಟಿಂಗ್‌ಗಾಗಿ ಅಥ್ಲೀಟ್‌ಗಳು ತಮ್ಮ ಸ್ವಂತ ಸಲಕರಣೆಗಳನ್ನು ಕೊಂಡೊಯ್ಯ ಬೇಕು.

Gopalk

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಪ್ರತಿಯನ್ನು**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ. ಇವರ ಮಾಹಿತಿಗಾಗಿ ಮತ್ತು ನಿಮ್ಮ ಅಧೀನದಲ್ಲಿ ಬರುವ ಶಾಲೆಗಳಿಗೆ ಕಳುಹಿಸುವಂತೆ ಕೋರಿದೆ.
2. ಆಯುಕ್ತರು ಉನ್ನತ ಶಿಕ್ಷಣ ಇಲಾಖೆ. ಇವರ ಮಾಹಿತಿಗಾಗಿ ಮತ್ತು ನಿಮ್ಮ ಅಧೀನದಲ್ಲಿ ಬರುವ ಕಾಲೇಜುಗಳಿಗೆ ಕಳುಹಿಸುವಂತೆ ಕೋರಿದೆ.
3. ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ದೈಹಿಕ ಶಿಕ್ಷಕರ ಸಂಘ ಇವರ ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner

ಭಾವ ಚಿತ್ರ

# ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ

## ವಿದ್ಯಾನಗರ, ಬೆಂಗಳೂರು.

**2022-23 ನೇ ಸಾಲಿನ ಪ್ರವೇಶ ಅರ್ಜಿ**

| | | | | | | | |
|---|---|---|---|---|---|---|---|
| 01 | ಅರ್ಜಿದಾರರ ಪೂರ್ಣ ಹೆಸರು | | | | | | |
| 02 | ಪಾಲಕ/ ಪೋಷಕರ ಹೆಸರು ಮತ್ತು ಖಾಯಂ ವಿಳಾಸ | | | | | | |
| 03 | ಆಧಾರ್ ಸಂಖ್ಯೆ: (ಕಡ್ಡಾಯವಾಗಿ ಲಗತ್ತಿಸುವುದು)<br>ಮೊಬೈಲ್ ಸಂಖ್ಯೆ: | | | | | | |
| 04 | ಜನ್ಮ ದಿನಾಂಕ ಹಾಗೂ ಓದುತ್ತಿರುವ ತರಗತಿ (ಶಾಲಾ ದಾಖಲಾತಿ ಅನ್ವಯ)<br>ಲಿಂಗ: ಬಾಲಕ/ಬಾಲಕಿ | ಮುಖ್ಯೋಪಾಧ್ಯಾಯರು / ಪ್ರಾಚಾರ್ಯರ ಸಹಿ ಹಾಗೂ ಮೊಹರು | | | | | |
| 05 | ಜಾತಿ: | ☐ ಸಾಮಾನ್ಯ ☐ ಪರಿಶಿಷ್ಟ ಜಾತಿ ☐ ಪರಿಶಿಷ್ಟ ಪಂಗಡ | | | | | |
| 06 | ಸೇರಬಯಸುವಕ್ರೀಡೆ (ಕೇವಲಒಂದುಕ್ರೀಡೆಯಲ್ಲಿಮಾತ್ರ) | ☐ ಅಥ್ಲೆಟಿಕ್ಸ್ ☐ ಈಜು ☐ ಶೂಟಿಂಗ್ | | | | | |
| 07 | ಇಲ್ಲಿಯವರೆಗಿನ ಕ್ರೀಡಾ ಸಾಧನೆ | ರಾಜ್ಯ | ವಲಯ | ರಾಷ್ಟ್ರ | ಅಂತರ ರಾಷ್ಟ್ರೀಯ | ವಿ.ವಿ | |
| | | | | | | | |
| 08 | ಆರೋಗ್ಯ ಧೃಢೀಕರಣ (ಅರ್ಹ ವೈದ್ಯರಿಂದ) | ವೈದ್ಯಾಧಿಕಾರಿ ಸಹಿ ಹಾಗೂ ಮೊಹರು | | | | | |
| 09 | ಎತ್ತರ (ಸೆಂ.ಮೀ) | | | | | | |
| 10 | ತೂಕ (ಕೆ.ಜಿ) | | | | | | |
| | | ಅಭ್ಯರ್ಥಿಯ ಸಹಿ | | | | | |

ಕುಮಾರ/ಕುಮಾರಿ ____________________ ಇವರ ಪಾಲಕ/ಪೋಷಕನಾದ ನಾನು ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಏನಾದರೂ ತಪ್ಪು ಎಂದು ಸಾಬೀತಾದಲ್ಲಿ ಇಲಾಖೆಯು ಈ ಸಂಬಂಧವಾಗಿ ನಿಗದಿ ಪಡಿಸಿರುವ ಷರತ್ತು ಹಾಗೂ ನಿಬಂಧನೆಗಳಿಗೆ ಬದ್ಧರಾಗಿರುತ್ತೇನೆ.

ಪೋಷಕರ ಸಹಿ ಮತ್ತು ಹೆಸರು

## ಕಛೇರಿಉಪಯೋಗಕ್ಕಾಗಿ

ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸರಿಯಾಗಿವೆ ಹಾಗೂ ಈ ಅಭ್ಯರ್ಥಿಯು ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರದ ಆಯ್ಕೆಗೆ ಅರ್ಹತಾ ನಿಯಮದ ಪ್ರಕಾರ ಅರ್ಹನಿದ್ದಾನೆ/ ಇದ್ದಾಳೆ ಎಂದು ಖಚಿತ ಪಡಿಸಿಕೊಂಡು ಧೃಢೀಕರಿಸಲಾಗಿದೆ.

ಈ ಅಭ್ಯರ್ಥಿಯನ್ನು ಗುರುತಿಸಿದ ಅಧಿಕಾರಿ /

ತರಬೇತುದಾರರ ಹೆಸರು:____________________

ಪದನಾಮ :____________________

ವಿಳಾಸ :____________________

ಉನ್ನತ ಕಾರ್ಯಕ್ಷಮತೆಯ ನಿರ್ದೇಶಕರು
ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ

Scanned by CamScanner